# ದಲಿತ ಕ್ರಿಯಾ ಸಮಿತಿಯಿಂದ ಮಹಾ ಪರಿ ನಿರ್ವಾಣ ದಿನ ಆಚರಣೆ

**ತುಮಕೂರು**

ಅಖಿಲ ಭಾರತ ಡಾ||ಅಂಬೇಡ್ಕರ್ ಪ್ರಚಾರ ಸಮಿತಿ ಹಾಗೂ ದಲಿತ ಕ್ರಿಯಾಸಮಿತಿ ತುಮಕೂರು ಜಿಲ್ಲಾ ಘಟಕದವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 61ನೇ ಮಹಾ ಪರಿನಿರ್ವಾಣ ದಿನವನ್ನು ನಗರದ ಟೌನ್‌ಹಾಲ್ ಮುಂಭಾಗದಲ್ಲಿ ಆಯೋಜಿಸಲಾಗಿತ್ತು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕಟೌಟ್‌ಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಮಾತನಾಡಿದ ಅಖಿಲ ಭಾರತ ಡಾ.ಅಂಬೇಡ್ಕರ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಎನ್.ಕೆ.ನಿಧಿ ಕುಮಾರ್, ಭಾರತದಂತಹ ಜಾತ್ಯಾತೀತ ರಾಷ್ಟ್ರಕ್ಕೆ ಅನ್ವಯವಾಗುವಂತಹ ಬೃಹತ್ ಸಂವಿಧಾನವನ್ನು ರಚಿಸಿಕೊಟ್ಟವರು ಡಾ.ಬಿ.ಆರ್.ಅಂಬೇಡ್ಕರ್ ಅವರು ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಆರ್. ಗಿರೀಶ್ ಮಾತನಾಡಿ, ಈ ದೇಶದ ದೀನ ದಲಿತರು, ಬಡವರು, ಹಿಂದುಳಿದ ವರ್ಗದವರ ಬಾಳಿಗೆ ಬೆಳಕು ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನವನ್ನು ದೇಶದ ಎಲ್ಲಾ ಸಮುದಾಯದ ಜನರು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ದಿನವಾಗಿದೆ.ದೇಶದ ಆಡಳಿತಕ್ಕೆ ಸಂಬಂಧಿಸಿದಂತೆ ಸಂವಿಧಾನ ರಚಿಸಿದ್ದೇ ಅಲ್ಲದೆ ದೇಶದ ಮಹಿಳೆಯರಿಗೆ ಸಮಾನ ಅವಕಾಶಗಳು ಲಭಿಸಬೇಕು ಎಂಬ ಉದ್ದೇಶದಿಂದ ಹಿಂದೂ ಕೋಡ್ ಬಿಲ್ ಮಂಡಿಸಿ,ಅದಕ್ಕೆ ಅನುಮೋಧನೆ ಪಡೆಯಲಾಗದೆ ತಮ್ಮ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಾಬಾ ಸಾಹೇಬರನ್ನು ದೇಶದ ಅರ್ಧದಷ್ಟು ಸಂಖ್ಯೆಯಲ್ಲಿರುವ ಮಹಿಳೆಯರು ಮರೆಯುವಂತಿಲ್ಲ. ದೇಶದ ಬಡಜನರಲ್ಲಿ ಸ್ವಾಭಿಮಾನದ ಜ್ಯೋತಿಯನ್ನು ಆರದಂತೆ ಮಾಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ನಾವೆಲ್ಲರೂ ಪೂಜಿಸಬೇಕಾಗಿದೆ ಎಂದರು.



> ಸಂವಿಧಾನದ ಅಡಿಯಲ್ಲಿ ಇಂದು ದೇಶದ ಸಾವಿರಾರು ಜಾತಿಗಳು ನೆಲೆ ಕಂಡುಕೊಳ್ಳಲು ಸಾಧ್ಯವಾಗಿದೆ.ಧ್ವನಿಯೇ ಇಲ್ಲದ ನೂರಾರು ಸಣ್ಣ ಪುಟ್ಟ ಜನಾಂಗಗಳು ಇಂದು ಸರಕಾರದ ಸವಲತ್ತುಗಳನ್ನು ಪಡೆದು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿದ್ದರೆ ಅದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಬರೆದ ಸಂವಿಧಾನವೇ ಕಾರಣ.ಇವರು ಕೇವಲ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸಿಮೀತವಾಗಿಲ್ಲ, ದೇಶದ ಹಿಂದುಳಿದ, ಅಲ್ಪಸಂಖ್ಯಾತ ಸೇರಿದಂತೆ ಹಲವಾರು ಸಮುದಾಯಗಳು ಇದರ ಲಾಭ ಪಡೆಯುತ್ತಿವೆ.

ಅಖಿಲ ಭಾರತ ದಲಿತ ಕ್ರಿಯಾಸಮಿತಿ ಜಿಲ್ಲಾಧ್ಯಕ್ಷ ಎನ್.ಬಿ.ಸೋಮಶೇಖರ್ ಮಾತನಾಡಿ, ಭಾರತದ ಜನರು ಇಂದು ತಮ್ಮದೇ ಆದ ಆರ್ಥಿಕ, ಶೈಕ್ಷಣಿಕ ನೀತಿ ನಿಯಮಗಳನ್ನು ರೂಪಿಸಿಕೊಂಡಿದ್ದರೆ, ಅದಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಬರೆದ ಸಂವಿಧಾನ ಕಾರಣ.ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಅವರ ನಡೆದು ದಾರಿಯಲ್ಲಿ ನಾವೆಲ್ಲರೂ ನಡೆಯುವ ಮೂಲಕ ಅವರು ಹೊತ್ತಿಸಿದ ಸ್ವಾಭಿಮಾನದ ಜೋತಿಯನ್ನು ನಾವೆಲ್ಲರೂ ಮುಂದಿನ ಪೀಳಿಗೆಗೆ ವರ್ಗಾಯಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಟೋ ರಾಜು, ಅಖಿಲ ಭಾರತ ಡಾ.ಅಂಬೇಡ್ಕರ್ ಪ್ರಚಾರ ಸಮಿತಿ ಗೌರವಾಧ್ಯಕ್ಷ ಹೆಗ್ಗೆರೆ ಕೃಷ್ಣಪ್ಪ, ಕಾನೂನು ಘಟಕದ ಅಧ್ಯಕ್ಷ ಎಸ್.ಆರ್.ಅಭಿನಯ್, ಅಖಿಲ ಭಾರತ ದಲಿತ ಕ್ರಿಯಾಸಮಿತಿ ಪ್ರಧಾನ ಕಾರ್ಯದರ್ಶಿ ಜಿ.ಆರ್.ಸುರೇಶ್, ನಗರ ಅಧ್ಯಕ್ಷ ಮಾರುತಿ ಪ್ರಸಾದ್, ಸಿದ್ದಲಿಂಗಯ್ಯ ಕೆ.ಎನ್., ಶಿವಾಜಿ, ಜೆ.ಸಿ.ಬಿ. ವೆಂಕಟೇಶ್, ರಂಜನ್, ಗೂಳೂರು ರಾಜಣ್ಣ,ವಕೀಲರಾದ ನಾಗೇಶ್, ರಾಜೇಶ್.ಹೆಚ್.ಬಿ., ಸಿದ್ದರಾಜು ಕೆ.ಜಿ,ಪಿ. ಎನ್.ರಾಮಯ್ಯ, ಭಾನು ಪ್ರಕಾಶ್, ಕಾಗ್ಗೆರೆ ಸುರೇಶ್, ಸಿದ್ದಲಿಂಗಪ್ಪ, ಗೂಳೂರು ಸಿದ್ದರಾಜು, ಕೃಷ್ಣಮೂರ್ತಿ ಕುಂಕುಮನಹಳ್ಳಿ, ರಾಮು ಮತ್ತಿತರರಿದ್ದರು.

# ಕುರಿಗಳ ಮೇಲೆ ಕ್ಯಾಟರ್ ಹರಿದು
# 20 ಕುರಿ ಸಾವು- 12 ಗಂಭೀರ



**ಚೇಳೂರು**

ಕುರಿ ರೊಪ್ಪದ ಮೇಲೆ ಕ್ಯಾಂಟರ್ ವಾಹನ ಹರಿದು 20 ಕುರಿಗಳು ಸಾವನ್ನಪ್ಪಿದ್ದು, 12 ಕುರಿಗಳು ಗಾಯಗೊಂಡಿರುವ ಘಟನೆ ಚೇಳೂರು ಹೋಬಳಿ ಶೇಷನಹಳ್ಳಿ ಬಳಿ ನಡೆದಿದೆ.

ಬುಧವಾರ ಬೆಳಿಗ್ಗೆ ಶೇಷನಹಳ್ಳಿ ಗ್ರಾಮದ ವಾಸಿ ರಾಜಣ್ಣ ಎಂಬುವರು ತಮ್ಮ ಕುರಿಗಳನ್ನು ತಮ್ಮ ರೊಪ್ಪದಿಂದ ಬೇರೆ ರೊಪ್ಪಕ್ಕೆ ಬಿಡುವಾಗ ಚೇಳೂರು ಮಾರ್ಗದಿಂದ ಅತಿವೇಗದಿಂದ ಬರುತ್ತಿದ್ದ ಕ್ಯಾಂಟರ್ ವಾಹನ 32 ಕುರಿಗಳು ಇರುವ ರೊಪ್ಪದ ಮೇಲೆ ಹರಿದ ಪರಿಣಾಮ ಸ್ಥಳದಲ್ಲಿಯೇ 20 ಕುರಿಗಳು ಸಾವನ್ನಪ್ಪಿ, 12 ಕುರಿಗಳು ಗಾಯಗೊಂಡಿವೆ. ಇದರ ಬಗ್ಗೆ ಕುರಿಯ ಮಾಲೀಕ ರಾಜಣ್ಣ ಚೇಳೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಮೇರೆಗೆ ಚೇಳೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲು ಮಾಡಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

# ಸಾಮಾಜಿಕ ನ್ಯಾಯ ಒದಗಿಸಿಕೊಟ್ಟ ಮಹಾಚೇತನ ಅಂಬೇಡ್ಕರ್

**ಬರಗೂರು**

ಈ ದೇಶಕ್ಕೆ ಸಂವಿಧಾನ ರಚಿಸಿ ಕೊಟ್ಟ ಸರ್ವರಿಗೂ ಸಾಮಾಜಿಕ ನ್ಯಾಯ ಒದಗಿಸಿ ಕೊಟ್ಟ ಮಹಾಚೇತನ ಡಾ.ಬಿಆರ್‌ಅಂಬೇಡ್ಕರ್‌ರವರ 61ನೇ ಮಹಾಪರಿನಿರ್ವಾಹಣ ದಿನವಾಗಿ ಇಂದು ಆಚರಿಸುತ್ತಿರುವುದು ಸಮಂಜಸವಾಗಿಯೇ ಇದೆ ಎಂದು ಸಿರಾ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪ.ಜಾತಿ ವಿಭಾಗದ ಅಧ್ಯಕ್ಷ ಕೆ.ನರಸಪ್ಪ ತಿಳಿಸಿದರು. ಸಿರಾ ತಾಲ್ಲೂಕು ಬರಗೂರು ಗ್ರಾಮದ ಅಂಬೇಡ್ಕರ್ ಭವನದಲ್ಲಿ ಸಿರಾ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪ.ಜಾತಿ ವಿಭಾಗ ಮತ್ತು ಹುಲಿಕುಂಟೆ ಹೋಬಳಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಜರುಗಿದ ಸಂವಿಧಾನ ಶಿಲ್ಪಿ ಡಾ.ಬಿಆರ್ ಅಂಬೇಡ್ಕರ್ ರವರ 61ನೇ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿಯೊಂದು ಜನಾಂಗಕ್ಕೂ ಅನುಕೂಲವಾಗುವ ಮೂಲ ಸೌಲಭ್ಯಗಳನ್ನು ತಲುಪಲೇಬೇಕು, ಮೇಲು ಕೀಳಿನ ಭೇದ ಹೋಗಲಾಡಿಸಿ ದೇಶಕ್ಕೆ ಸಂವಿಧಾನ ರಚಿಸಿದ ಭಾರತ ರತ್ನ ಡಾ.ಬಿ.ಆರ್ ಅಂಬೇಡ್ಕರ್ ಆದರ್ಶವನ್ನು ಪ್ರತಿಯೊಬ್ಬರು ಪಾಲಿಸಲೇಬೇಕು ಎಂದರು.

ಬರಗೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ.ನಂದೀಶ್ ಮಾತನಾಡಿ ಇಂದು ದೇಶಕ್ಕೆ ಮಹತ್ವ ದಿನವಾಗಿದೆ ಭಾರತ ರತ್ನ ಡಾ.ಬಿಆರ್ ಅಂಬೇಡ್ಕರ್ ರವರ 61ನೇ ಮಹಾಪರಿನಿರ್ವಾಹಣ ದಿನವನ್ನು ಆಚರಿಸುತಿದ್ದೇವೆ ನಮಗೆಲ್ಲಾ ದೇಶಕ್ಕೆ ಸಂವಿಧಾನ ಕೊಟ್ಟ ಮಹಾತ್ಮರು ಮನಗೆಲ್ಲಾ ಪ್ರೇರಣಾ ಶಕ್ತಿ ಇವರ ನಾಮ ಸ್ಮರಣೆ ಎಂದರು.



ಬರಗೂರು ಉಪ ಠಾಣೆಯ ಎಎಸ್‌ಐ ಮುನಿಯಪ್ಪ, ಬರಗೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ರಂಗಪುರ ತಿಪ್ಪೇಸ್ವಾಮಿ, ಬಿಲ್ ಕಲೆಕ್ಟರ್ ಲಕ್ಷ್ಮಣ್, ಬರಗೂರು ಬಾಲಕೃಷ್ಣ,ಎಸ್ಸಿ ಘಟಕದ ಹಿರಿಯ ಉಪಾಧ್ಯಕ್ಷ ದೇವಗಿರಿ ರಾಮಚಂದ್ರಪ್ಪ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಕಾರೇಹಳ್ಳಿ ನರಸಿಂಹಯ್ಯ,ಭೂತ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪ್ರವೀಣ,ಕಲಿಗೋನಹಳ್ಳಿ ತಿಪ್ಪೆಸ್ವಾಮಿ, ಹುಲಿಕುಂಟೆ ಹೋಬಳಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಕಂಬಿಮಂಜುನಾಥ್, ಬರಗೂರು ಈರಣ್ಣ, ಬಾಲಕೃಷ್ಣ, ಲೋಕೇಶ್, ರವಿ, ಪೋಲಿಸ್ ಯತೀಶ್ ಇತರರು ಇದ್ದರು.

# ಅಂಬೇಡ್ಕರ್‌ರವರ ತಾತ್ವಿಕತೆಯನ್ನು ರೂಢಿಸಿಕೊಳ್ಳಬೇಕು

**ತುಮಕೂರು**

ಡಾ.ಬಿ.ಆರ್ ಅಂಬೇಡ್ಕರ್‌ರವರ 61ನೇ ಪರಿನಿರ್ವಾಣದ ಅಂಗವಾಗಿ ಕ್ರಾಂತಿ ಪ್ರತಿಕ್ರಾಂತಿಯ ಸಂವಾದವನ್ನು ತುಮಕೂರು ಜಿಲ್ಲಾ ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯಿಂದ ಯುವಜನ ಸಂಪನ್ಮೂಲ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ತುಮಕೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ.ಬಿ.ರಮೇಶ್ ಆಶಯ ನುಡಿಗಳನ್ನಾಡಿ ಭಾರತದಲ್ಲಿ ಎರಡು ಸಂವಿಧಾನಗಳು ಆಳ್ವಿಕೆಯಲ್ಲಿವೆ. ಮೊದಲನೆಯದ್ದು 2500ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಮನುಸ್ಮತಿ ಸಂವಿಧಾನ ಇದರ ಮೂಲ ತಿರುಳು ಕೆಲವರು ಶ್ರೇಷ್ಠರು ಮತ್ತು ಹಲವಾರು ಕನಿಷ್ಠರು ಎನ್ನವುದಾಗಿದೆ. ಇದೆ ನಮ್ಮ ಮೆದುಳು ಮತ್ತು ಭಾರತೀಯರ ರಕ್ತದ ಕಣಕಣದಲ್ಲೂ ಆಚರಣೆಯಲ್ಲಿದ್ದು ಮಾನವೀಯತೆಯನ್ನು ನಿಯಂತ್ರಿಸುತ್ತಿದೆ. ಎರಡನೇ ಸಂವಿಧಾನ ಸಿಂಧೂ ನಾಗರೀಕತೆಯ ಮೂಲ ನಿವಾಸಿಗಳ ನಾಗ ಕುಲಕ್ಕೆ ಸೇರಿದ ಭ್ರಾತೃತ್ವದ ಅಲಿಖಿತ ಸಂವಿಧಾನ ಸ್ವರೂಪದಲ್ಲಿ ಮಾನವೀಯ ಮೌಲ್ಯಗಳು ಇದನ್ನೆ ಅಂಬೇಡ್ಕರ್ ರಚಿಸಿದ ಸ್ವಾತಂತ್ರ್ಯ ನಂತರದ ಭಾರತ ಸಂವಿಧಾನದ ಮೂಲ ಆಶಯವಾಗಿದೆ. 1950 ಜನವರಿ 26ರಂದು ಪಾರ್ಲಿಮೆಂಟ್ ಅಂಗೀಕರಿಸಿದೆ ಈ ಸಂವಿಧಾನ ಗೋಚರಿತವಾದ ಸಂವಿಧಾನ ಆಚರಣೆಯಲ್ಲಿ ಇಲ್ಲ, ಆದರೆ ಅಘೋಚರಿತವಾದ ಮನು ಸಂವಿಧಾನ ಆಚರಣೆಯಲ್ಲಿದೆ. ಆದ್ದರಿಂದ ನ್ಯಾಯ ಕಾಪಾಡಲು ಸಂಪತ್ತನ್ನು ಹಂಚಲು ರಾಜಕೀಯ ಅಧಿಕಾರವನ್ನು ವಂಚಿತ ಸಮುದಾಯಗಳು ಪಡೆದುಕೊಳ್ಳುವ ಮೂಲಕ ಪ್ರತಿ ಕ್ರಾಂತಿಗೆ ಮುಂದಾಗಬೇಕಿದೆ ಎಂದರು.



ಅನಂತರ ತುಮಕೂರು ವಿಶ್ವವಿದ್ಯಾನಿಲಯದ ಸಂಶೋಧನ ವಿದ್ಯಾರ್ಥಿ ಸಚ್ಚಿನ್ ಮತ್ತು ಉಪನ್ಯಾಸಕರಾದ ಲಕ್ಷ್ಮೀರಂಗಯ್ಯ ಅಂಬೇಡ್ಕರ್‌ರವರು ಬರೆದ ಕ್ರಾಂತಿ ಪ್ರತಿಕ್ರಾಂತಿಯ ಲೇಖನವನ್ನು ಮಂಡಿಸಿ ಸಂವಾದಕ್ಕೆ ಮುಂದಾದರು. ಈ ಸಂವಾದದಲ್ಲಿ ದಲಿತ ಮುಖಂಡರಾದ ನರಸೀಯಪ್ಪ, ಉಪನ್ಯಾಸಕರಾದ ಹನುಮಂತರಾಯಪ್ಪ, ಸ್ಲಂ ಜನಾಂದೋಲನಾ-ಕರ್ನಾಟಕದ ಎ.ನರಸಿಂಹಮೂರ್ತಿ, ದೀಪಿಕಾ, ಸಿದ್ದಪ್ಪ, ಮಂಜುನಾಥ್, ಮುರುಗ, ಹಯಾತ್, ಶಂಕರಯ್ಯ, ಭೀಮನಾಯ್ಕ್, ಪುಟ್ಟರಾಜ್, ಕಾಶಿರಾಜ್, ಅರುಣ್, ಶೆಟ್ಟಾಳಯ್ಯ, ರಘು, ಗಾಯತ್ರಿ, ಲತಾ ಮತ್ತು ಯುವಜನ ಸಂಪನ್ಮೂಲ ಕೇಂದ್ರದ ಯುವ ಕಾರ್ಯಕರ್ತರು ಪಾಲ್ಗೊಂಡಿದ್ದರು.

> ಡಿ.6 ಚಾರಿತ್ರಿಕ ದಿನ. ನಮ್ಮ ನಾಯಕ ಅಂಬೇಡ್ಕರ್ ಪರಿ ನಿರ್ವಾಣ ಹೊಂದಿದ ದಿನ. ಭಾರತದ ಚರಿತ್ರೆಯನ್ನು ಪುನರ್ ವ್ಯಾಖ್ಯಾನಗೊಳಿಸಿಕೊಂಡು ನಮ್ಮ ಮುಂದಿನ ಗುರಿಯನ್ನು ಸ್ಪಷ್ಟಪಡಿಸಿಕೊಳ್ಳುವಂತ ದಿನ, ಸೈದ್ಧಾಂತಿಕ ಸಂಘರ್ಷದ ಕಾಲಘಟ್ಟದಲ್ಲಿ ಇದ್ದೇವೆ. ಅಂಬೇಡ್ಕರ್‌ರವರ ಕ್ರಾಂತಿಯ ವಿಚಾರಗಳು ನಮ್ಮ ಮನಸ್ಸಿಗೆ ಹೋದಾಗ ಮಾತ್ರ ಸಾಂಸ್ಕೃತಿಕ ಗುಲಾಮಗಿರಿಯಿಂದ ಹೊರಬರಲು ಸಾಧ್ಯ.
>
> ■ ಪ್ರೊ.ಕೆ.ದೊರೈರಾಜ್

# ಹಿಂದುಳಿದ ವರ್ಗಗಳ ಅಭಿವೃದ್ಧಿಯ ನೇತಾರ ಅಂಬೇಡ್ಕರ್

**ಗುಬ್ಬಿ**

ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್ ಅವರು ದೇಶದ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಯ ಜೊತೆಗೆ ಸಾಮಾಜಿಕ ಸಮಾನತೆ ಕಲ್ಪಿಸುವಂತಹ ಮಹತ್ವದ ಸಾಧನೆ ಮಾಡಿದ್ದಾರೆ. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡಾಗ ಮಾತ್ರ ಸಮೃದ್ಧ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ಜೆಡಿಎಸ್ ಯುವ ಮುಖಂಡ ದುಶ್ಯಂತ್ ಶ್ರೀನಿವಾಸ್ ಕರೆನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಜೆಡಿಎಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ ಡಾ:ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನ ಆಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದ ಅಭ್ಯುದಯಕ್ಕೆ ಮಹತ್ವದ ಕೊಡುಗೆ ನೀಡಿದ ಮಹಾನ್ ನಾಯಕರುಗಳನ್ನು ಭಾರತದಲ್ಲಿ ಕೇವಲ ಜಾತಿ ಬಣ್ಣವನ್ನು ಕಟ್ಟಿ ಜಾತಿಗೆ ಸೀಮಿತಗೊಳಿಸುತ್ತಾರೆ, ಇದು ಸರಿಯಲ್ಲ. ಪ್ರತಿಯೊಬ್ಬ ನಾಯಕರ ಕೊಡುಗೆ ಮಹತ್ವ ಪೂರ್ಣವಾದವುಗಳಾಗಿವೆ ಎಂದರು.

ದೇಶದ ಹಿಂದುಳಿದವರ ಆಶಾ ಕಿರಣವಾಗಿ ತಮ್ಮ ಅದ್ವಿತೀಯ ವಿದ್ವತ್ತಿನಿಂದ ರಾಷ್ಟ್ರಕ್ಕೆ ಸಂವಿಧಾನವನ್ನು ನೀಡಿ ವಿಶ್ವಕ್ಕೆ ಮಾದರಿಯಾಗಿದ್ದಾರೆ. ಭಾರತದ ಪ್ರತಿಯೊಬ್ಬ ಪ್ರಜೆಯು ತನ್ನ ಹಕ್ಕನ್ನು ಚಲಾಯಿಸಲು ಬೇಕಾದಂತಹ ಕಾನೂನನ್ನು ಜಾರಿಗೊಳಿಸುವ ಮೂಲಕ ಜಾತ್ಯತೀತ ರಾಷ್ಟ್ರಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಅಂತಹ ಮಹಾತ್ಮರ ಆದರ್ಶಗಳನ್ನು ಸಾಮಾಜಿಕ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವತ್ತ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದರು.



ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಹೆಚ್.ಆರ್. ಗುರುರೇಣುಕಾರಾಧ್ಯ ಮಾತನಾಡಿ ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್ ಅವರ ಆದರ್ಶಗಳನ್ನು ಪಾಲಿಸುವ ಮೂಲಕ ನಮ್ಮ ರಾಷ್ಟ್ರವನ್ನು ಮತ್ತಷ್ಟು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯ್ತಿ ಅಧ್ಯಕ್ಷೆ ಪ್ರೇಮಾಶಿವಕುಮಾರ್, ಎಪಿಎಂಸಿ ಅಧ್ಯಕ್ಷ ಕಳ್ಳಿಪಾಳ್ಯ ಲೋಕೇಶ್, ಸದಸ್ಯರಾದ ಲಕ್ಷ್ಮಿರಂಗಯ್ಯ, ವಿ.ವೀರಭದ್ರಯ್ಯ, ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಕೆ.ಸಿ.ಕೃಷ್ಣಮೂರ್ತಿ, ಯುವ ಜೆಡಿಎಸ್ ಅಧ್ಯಕ್ಷ ಕೆ.ಆರ್.ವೆಂಕಟೇಶ್, ಪಟ್ಟಣ ಪಂಚಾಯ್ತಿ ಸದಸ್ಯೆ ರೂಪಾ ಪಾಂಡು, ಮುಖಂಡರಾದ ಹೆಚ್.ಡಿ.ಯಲ್ಲಪ್ಪ, ಹೆಚ್.ಡಿ.ರಂಗಸ್ವಾಮಿ, ಉಂಡೆ ರಾಮಣ್ಣ, ಡಿ.ರಘು, ಎಸ್.ಸಿ.ಘಟಕದ ಅಧ್ಯಕ್ಷ ಮಹಾದೇವ್, ಮಹಮದ್ ರಹಮತ್ ಉಲ್ಲಾ, ನಭೀಖಾನ್, ಸಿ.ಯೂ.ರಾಜಣ್ಣ, ಬಸವರಾಜು, ರಮೇಶ್, ಲಕ್ಕಣ್ಣ ಸೇರಿದಂತೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಫೋಟೋ2: ಗುಬ್ಬಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಜೆಡಿಎಸ್ ಪಕ್ಷದ ವತಿಯಿಂದ ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆಯನ್ನು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಲಾಯಿತು.

## ಬ್ರಹ್ಮರಥೋತ್ಸವ

**ತುಮಕೂರು:** ಹೊರನಾಡು ಶ್ರೀ ಅನ್ನಪೂರ್ಣೇಶ್ವರಿಯ ಬ್ರಹ್ಮರಥೋತ್ಸವವು ಫೆಬ್ರವರಿ 18 ರಂದು ಮಧ್ಯಾಹ್ನ 12.23 ಗಂಟೆಗೆ ಜರುಗಲಿದೆ.

ಈ ಕಾರ್ಯಕ್ರಮದ ಅಂಗವಾಗಿ ಫೆ.16 ರಂದು ರಥೋತ್ಸವಾಂಗ ಶ್ರೀ ಗಣಪತಿ ಪೂಜೆ, ಶ್ರೀ ಮಹಾಗಣಪತಿ ಹೋಮ ಮತ್ತು ರಾತ್ರಿ ಮಹಾರಂಗ ಪೂಜೆ, ಫೆ.17 ರಂದು ಮಧ್ಯಾಹ್ನ 12.24 ಗಂಟೆಗೆ ಧ್ವಜಾರೋಹಣ, ರಾತ್ರಿ ಪುಷ್ಪ ಕಾರೋಹಣ. ಫೆ.18 ರಂದು ರಾತ್ರಿ 10 ಗಂಟೆಗೆ ಮಹಾರಥೋತ್ಸವ. ಫೆ. 19 ರಂದು ಕುಂಕುಮೋತ್ಸವ, ಅವಭೃತಸ್ನಾನ, ರಾತ್ರಿ ಇಡಿಗಾಯಿ ಸೇವೆ, ಧ್ವಜಾವರೋಹಣ, ಫ.20 ರಂದು ಸಂಪ್ರೋಕ್ಷಣೆ ನಡೆಯಲಿದೆ.

## ವೀರಶೈವ ವಧು-ವರರ ಸಮಾವೇಶ

**ತುಮಕೂರು:** ಬೆಂಗಳೂರು ಗಾಂಧಿನಗರದ 5ನೇ ಮುಖ್ಯ ರಸ್ತೆಯ 6ನೇ ತಿರುವಿನ ಲಿಂಗಾಯತ ಕಲ್ಯಾಣ ಟ್ರಸ್ಟ್‌ನಲ್ಲಿ ಡಿಸೆಂಬರ್ 10 ರಂದು ಮಧ್ಯಾಹ್ನ 2 ಗಂಟೆಗೆ 117 ನೇ ವೀರಶೈವ ವಧು-ವರರ ಸಮಾವೇಶವನ್ನು ಏರ್ಪಡಿಸಲಾಗಿದೆ. ಆಸಕ್ತ ಡಾಕ್ಟರ್ಸ್, ಇಂಜಿನಿಯರ್ಸ್ ಪಿ.ಜಿ.ಪದವೀಧರರು, ಮತ್ತು ಅನಿವಾಸಿ ಭಾರತೀಯ ವೀರಶೈವ-ಲಿಂಗಾಯತ ವಧು-ವರರು ತಮ್ಮ ಪೋಷಕರು ಸಮಾವೇಶದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080-22269237 ಅನ್ನು ಸಂಪರ್ಕಿಸಬಹುದಾಗಿದೆ.

# ಕಾನೂನು ಸಾಕ್ಷರತಾ ರಥಕ್ಕೆ ಚಾಲನೆ



**ತಿಪಟೂರು**

ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಾನೂನು ಸಾಕ್ಷರತಾ ರಥದ ಬಸ್ಸಿನ ಮೂಲಕ ನಡೆಯುವ ಕಾರ್ಯಕ್ರಮಗಳಿಗೆ ಹಸಿರು ನಿಶಾನೆ ತೋರುವ ಮೂಲಕ 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹಾಗೂ ತಾಲ್ಲೂಕು ಕಾನೂನು ಸೇವಾಸಮಿತಿ ಅಧ್ಯಕ್ಷರಾದ ಆರ್.ಶಾರದಾ ಚಾಲನೆ ನೀಡಿದರು.

ಹಿರಿಯೂರು ನ್ಯಾಯಾಧೀಶರಾದ ಎಸ್.ಟಿ. ಸತೀಶ್ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಹೆಚ್.ಕೆ.ರೇಷ್ಮ, ಅಧಿಕ ಸಿವಿಲ್ ನ್ಯಾಯಾಧೀಶರಾದ ವಿ.ಎಲ್.ಅಮರ್, ವಕೀಲರ ಸಂಘದ ಅಧ್ಯಕ್ಷ ಟಿ.ಎಸ್. ರಾಜೇಶ್, ಕಾರ್ಯದರ್ಶಿ ಸಿ.ಎನ್.ನಾಗೇಂದ್ರ, ಇ.ಓ. ಎಸ್.ಕೆ.ಷಡಕ್ಷರಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಯೋಜನಾಧಿಕಾರಿ ಶಾಂತಾನಾಯಕ್ ಉಪಸ್ಥಿತರಿದ್ದರು.


**ತುಮಕೂರು ಮಹಾನಗರ ಪಾಲಿಕೆ**

ದೂ: 2278480, ಫ್ಯಾಕ್ಸ್: 2275106, ಇ-ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.gov.in

ನಂ.: ತುಮಪಾ/ತಾಂಶಾ/ಸಿಆರ್/668/2017-18 ದಿನಾಂಕ: 23.11.2017

**ಟೆಂಡರ್ ಪ್ರಕಟಣೆ** (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರಪಾಲಿಕೆ ನಿಧಿ ಅನುದಾನದಲ್ಲಿ 03 ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumkurcity.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

**ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.**

(1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **23.11.2017ರಿಂದ 23.12.2017ರವರೆಗೆ.** (2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **23.12.2017ರಂದು ಸಾಯಂಕಾಲ 4.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **26.12.2017ರ ಸಾಯಂಕಾಲ 4.45 ಗಂಟೆ ನಂತರ.** (4) ಟೆಂಡರ್‌ನ ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆಯುವ ಸಮಯದಲ್ಲಿ ಅಂದಾಜು ದರಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವುದು.

| ಕ್ರ ಸಂ. | ಕಾಮಗಾರಿಯ ವಿವರ | ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್ ನಂ.07ರಲ್ಲಿ ಶಿಶುವಿಹಾರ ಹತ್ತಿರ ಡಾಕ್ಟರ್ ವಾಟರ್ ಸುತ್ತಲೂ ಕಾಂಪೌಂಡ್ ನಿರ್ಮಾಣ ಮತ್ತು ಜಿ.ಸಿ.ಆರ್. ಕಾಲೋನಿ ತೋಟದ ಮನೆ ರಸ್ತೆ ಹತ್ತಿರ ಮಳೆ ಚರಂಡಿ ಮೇಲೆ ಅಡ್ಡವಾಗಿ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ | 4.90 | 12500.00 |
| 2 | ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್ ನಂ.07ರಲ್ಲಿ ಬೀಬಿಜಾನ್ ಲೇಔಟ್ ಹತ್ತಿರ ಚರಂಡಿ ಮತ್ತು ಡೆಕ್‌ಸ್ಲ್ಯಾಬ್ ನಿರ್ಮಾಣ ಕಾಮಗಾರಿ | 4.90 | 12500.00 |
| 3 | ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್ ನಂ.07ರಲ್ಲಿ ಶಿಶುವಿಹಾರ ರಸ್ತೆಯಿಂದ ಸಂತೆಪೇಟೆಗೆ ಹೋಗುವ ರಸ್ತೆಗೆ ಚರಂಡಿ ನಿರ್ಮಾಣ ಕಾಮಗಾರಿ | 9.80 | 24500.00 |

ಸಹಿ/- (ಹೆಚ್. ರವಿಕುಮಾರ್) ಮಹಾಪೌರರು, ಮಹಾನಗರ ಪಾಲಿಕೆ, ತುಮಕೂರು
ಸಹಿ/- (ಫರ್‌ಜಾನಖಾನಂ) ಉಪಮಹಾಪೌರರು ಮಹಾನಗರ ಪಾಲಿಕೆ, ತುಮಕೂರು
ಸಹಿ/- (ವಿಜಯ ರುದ್ರೇಶ್) ನಗರ ಯೋಜನಾ ಮತ್ತು ಸ್ಥಾಯಿ ಸಮಿತಿ ಮಹಾನಗರ ಪಾಲಿಕೆ, ತುಮಕೂರು
ಸಹಿ/- (ಮಂಜುನಾಥಸ್ವಾಮಿ ಎಲ್.) ಕೆ.ಎಂ.ಎ.ಎಸ್. ಆಯುಕ್ತರು, ಮಹಾನಗರ ಪಾಲಿಕೆ, ತುಮಕೂರು

ವಾ.ಸಾ.ಇ./ ತುಮಕೂರು/ 06/ ಎಂಸಿಎ/ 2017-18



**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು**

ದೂರವಾಣಿ: 0816-2278387, ಇ-ಮೇಲ್: dhotumkur@gmail.com

ಸಂಖ್ಯೆ: ಜಿಆತು/ಸಿ(1)/10/17-18 ದಿನಾಂಕ: 04.12.2017

**ಪ್ರಕಟಣೆ**

**ವಿಷಯ:** ತುಮಕೂರು ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಲ್ಲಿನ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ಮುಖ್ಯ ವೈದ್ಯಾಧಿಕಾರಿ/ಡಿಸಿಎಂಓ/ಹಿರಿಯ ವೈದ್ಯಾಧಿಕಾರಿ/ತಜ್ಞ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:** (1) ಸರ್ಕಾರದ ಆದೇಶ ಸಂಖ್ಯೆ: ಆಕುಕ/297/ಹೆಚ್.ಎಸ್.ಹೆಚ್/2015 ದಿನಾಂಕ: 22.04.2016 ಹಾಗೂ ಸೇರ್ಪಡೆ ಆದೇಶ ದಿನಾಂಕ: 07.10.2016. (2) ಸರ್ಕಾರಿ ಆದೇಶ ಸಂಖ್ಯೆ: ಆಕುಕ178/ಹೆಚ್‌ಎಸ್‌ಹೆಚ್2016 ಬೆಂಗಳೂರು, ದಿನಾಂಕ: 20.05.2016. (3) ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆಕುಕ:25ಎಂಎಸ್‌ಎನ್2016 ದಿನಾಂಕ: 14.03.2016. (4) ಆಯುಕ್ತಾಲಯದ ಪತ್ರ ಸಂಖ್ಯೆ: ಜೆಆರ್‌ಓ1(ಎ)/101/12-13, ದಿನಾಂಕ: 19.10.2016. (5) ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ: ಆಕುಕ 528 ಪ್ರಕಾ 2016 ದಿನಾಂಕ: 09.11.2016. (6) ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂಖ್ಯೆ: ಆಕುಕನಿ/ಆಪ್ರ/21/16-17, ದಿನಾಂಕ: 12.12.2016. (7) ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಇವರ ಟಿಪ್ಪಣಿ ಅನುಮೋದನೆ ದಿನಾಂಕ: 30.11.2017.

ತುಮಕೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಲ್ಲಿನ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ಮುಖ್ಯ ವೈದ್ಯಾಧಿಕಾರಿ/ಡಿಸಿಎಂಓ/ಹಿರಿಯ ವೈದ್ಯಾಧಿಕಾರಿ ಹಾಗೂ ವಿವಿಧ ತಜ್ಞತೆಯ ತಜ್ಞ ವೈದ್ಯರುಗಳ ಹುದ್ದೆಗಳು ಈ ಕೆಳಕಂಡಂತೆ ಖಾಲಿ ಇದ್ದು ಸದರಿ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಖಾಯಂ ಹುದ್ದೆಗಳನ್ನು ನೇಮಿಸಿಕೊಳ್ಳುವವರೆಗೆ, ಎಂ.ಬಿ.ಬಿ.ಎಸ್. ವಿದ್ಯಾರ್ಹತೆ ಹೊಂದಿರುವ ಹಾಗೂ ವಿವಿಧ ತಜ್ಞತೆ ಹೊಂದಿರುವ ತಜ್ಞ ವೈದ್ಯರುಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವಂತೆ ಉಲ್ಲೇಖಿತ(1)ರಿಂದ (7)ರ ವರೆಗಿನ ಪತ್ರಗಳಲ್ಲಿ ಆದೇಶವಾಗಿರುವ ಹಿನ್ನೆಲೆಯಲ್ಲಿ ಸದರಿ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ತಮ್ಮ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಗೂ ದೃಢೀಕೃತ ಪ್ರತಿಗಳೊಂದಿಗೆ **ದಿನಾಂಕ: 12.12.2017ರಂದು** ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ.

1) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು - 9 ಹುದ್ದೆ
2) ಮುಖ್ಯ ವೈದ್ಯಾಧಿಕಾರಿಗಳು - 4 ಹುದ್ದೆ
3) ಡಿ.ಸಿ.ಎಂ.ಓ. - 1 ಹುದ್ದೆ
4) ಹಿರಿಯ ವೈದ್ಯಾಧಿಕಾರಿಗಳು - 2 ಹುದ್ದೆ
5) ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೆಳಕಂಡಂತೆ ಖಾಲಿ ಇರುವ ತಜ್ಞ ವೈದ್ಯರುಗಳ ಹುದ್ದೆಗಳು.
   i. ಅರವಳಿಕೆ ತಜ್ಞರು - 5 ಹುದ್ದೆ
   ii. ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು - 7 ಹುದ್ದೆ
   iii. ಫಿಜಿಷಿಯನ್ - 2 ಹುದ್ದೆ
   iv. ಶಸ್ತ್ರಚಿಕಿತ್ಸಕರು - 2 ಹುದ್ದೆ
   v. ರೇಡಿಯಾಲಾಜಿಸ್ಟ್ - 1 ಹುದ್ದೆ
   vi. ನೇತ್ರ ತಜ್ಞರು - 2 ಹುದ್ದೆ
   vii. ಮಕ್ಕಳ ತಜ್ಞರು - 3 ಹುದ್ದೆ
   viii. ಕಿವಿ, ಮೂಗು ಮತ್ತು ಗಂಟಲು ತಜ್ಞರು - 1 ಹುದ್ದೆ

**ಸೂಚನೆ:** (1) ತಜ್ಞ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಅರ್ಹ ವೈದ್ಯಾಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ ಎದುರು ಹುದ್ದೆಯಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದ ವೈದ್ಯ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. (2) ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿದ 65 ವರ್ಷ ವಯೋಮಿತಿಯೊಳಗಿನ ತಜ್ಞ ವೈದ್ಯರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳಲಾಗುವುದು. (3) ವಯೋಮಿತಿ: ಕನಿಷ್ಠ-18 ವರ್ಷ, ಗರಿಷ್ಠ-35 ವರ್ಷ, 2ಎ, 2ಬಿ, 3ಎ, 3ಬಿ-ಗರಿಷ್ಠ 38 ವರ್ಷ, ಪ್ರವರ್ಗ-1, ಪ.ಜಾ., ಪ.ಪಂ - ಗರಿಷ್ಠ 40 ವರ್ಷ. (4) ಸಂದರ್ಶನ ನಡೆಯುವ ದಿನಾಂಕ: **12.12.2017ರಂದು ಬೆಳಿಗ್ಗೆ 11.00 ಗಂಟೆಯಿಂದ.** (5) ಸಂದರ್ಶನ ನಡೆಯುವ ಸ್ಥಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಅಮಾನಿಕೆರೆ ಎದುರು, ಹಳೇ ಎನ್.ಹೆಚ್.-4 ರಸ್ತೆ, ತುಮಕೂರು. (6) ನೇಮಕಾತಿ ಮಾಡಿಕೊಳ್ಳಲಿರುವ ಖಾಲಿ ಹುದ್ದೆಗಳ ವಿವರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಪಡೆದುಕೊಳ್ಳಬಹುದು. (7) ಪ್ರಕಟಣೆಯಲ್ಲಿ ಪ್ರಕಟಿಸಿರುವ ಹುದ್ದೆಗಳು ಕೌನ್ಸಿಲಿಂಗ್ ಸಮಯದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತವೆ. (8) ಗುತ್ತಿಗೆ ಮೇಲೆ ಆಯ್ಕೆಗೊಳ್ಳುವ ಅಭ್ಯರ್ಥಿಗಳು ಕನಿಷ್ಠ 9 ತಿಂಗಳ ಅವಧಿಯವರೆಗೂ ಕರ್ತವ್ಯ ನಿರ್ವಹಿಸಲು ಬದ್ಧರಿರತಕ್ಕದ್ದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು

ವಾ.ಸಾ.ಇ./ ತುಮಕೂರು/25/ ಎಂಸಿಎ/ 2017-18